ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಪಿಎಚ್.ಡಿ ಅಧ್ಯಯನ ವಿಷಯ

ಕನ್ನಡ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳು

(ಪ್ರಾತಿನಿಧಿಕ ಮಹಿಳಾ ಆತ್ಮಕಥನಗಳನ್ನು ಅನುಲಕ್ಷಿಸಿ)

(ಪಿಎಚ್. ಡಿ ಅಧ್ಯಯನಕ್ಕಾಗಿ ಸಲ್ಲಿಸಿದ ಪೂರ್ವಭಾವಿ ಸಾರಲೇಖ)

ಸಂಶೋಧನಾ ವಿದ್ಯಾರ್ಥಿನಿ

ಭಾಗ್ಯಜ್ಯೋತಿ ಬಿರಾದಾರ

ಮಾರ್ಗದರ್ಶಕರು

ಪ್ರೊ. ಮಹೇಶ ಚಿಂತಾಮಣಿ

ಹಿರಿಯ ಪ್ರಾಧ್ಯಾಪಕರು,

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

2024

ಕನ್ನಡ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳು

(ಪ್ರಾತಿನಿಧಿಕ ಮಹಿಳಾ ಆತ್ಮಕಥನಗಳನ್ನು ಅನುಲಕ್ಷಿಸಿ)

ಪರಿವಿಡಿ

ಅಧ್ಯಾಯ 1. ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸ್ವರೂಪ

1.1. ಪ್ರಸ್ತಾವನೆ

1.2. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1.3. ಅಧ್ಯಯನದ ಮಹತ್ವ

1.4. ಅಧ್ಯಯನದ ವಿಧಾನ

1.5. ಅಧ್ಯಯನದ ಸ್ವರೂಪ

1.6. ಪೂರ್ವಾಧ್ಯಯನಗಳ ಸಮೀಕ್ಷೆ

ಅಧ್ಯಾಯ 2. ಆತ್ಮಕಥನಗಳ ಇತಿಹಾಸ ಮತ್ತು ಸ್ವರೂಪ

2.1. ಆತ್ಮಕಥನದ ಅರ್ಥ

2.2. ಆತ್ಮಕಥನಗಳ ರಚನೆಯ ಉದ್ದೇಶ

2.3. ಆತ್ಮಕಥನಗಳ ಸ್ವರೂಪ

2.4. ಆತ್ಮಕಥನಗಳ ಆರಂಭ ಕಾಲ

2.5. ಕನ್ನಡದಲ್ಲಿ ಮಹಿಳಾ ಆತ್ಮಕಥನಗಳ ಆರಂಭಕಾಲ

2.6. ಆತ್ಮಕಥನಗಳ ರಚನೆಗೆ ಪ್ರೇರಣೆಗಳು

ಅಧ್ಯಾಯ 3. ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳು

3.1. ಶೈಕ್ಷಣಿಕ ನೆಲೆ

3.2. ಕೌಟುಂಬಿಕ ನೆಲೆ

3.3. ಸಾಮಾಜಿಕ ನೆಲೆ

3.4. ಪುರುಷ ಯಜಮಾನಿಕೆ ನೆಲೆ

3.5. ಅಧಿಕಾರದ ಹಕ್ಕುಗಾರಿಕೆ ನೆಲೆ

ಅಧ್ಯಾಯ 4. ಅನುವಾದಿತ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳು

4.1. ಶೈಕ್ಷಣಿಕ ನೆಲೆ

4.2. ಕೌಟುಂಬಿಕ ನೆಲೆ

4.3. ಸ್ತ್ರೀ ಸಬಲೀಕರಣದ ನೆಲೆ

4.4. ಪ್ರತಿರೋಧದ ನೆಲೆ

4.5. ಸ್ವಾವಲಂಬಿ ನೆಲೆ

4.6. ಜಾತಿ ಅಸಮಾನತೆಯ ನೆಲೆ

4.7. ರಾಜಕೀಯ ಸ್ಥಾನಮಾನಗಳ ನೆಲೆ

ಅಧ್ಯಾಯ 5. ಮಹಿಳಾ ಆತ್ಮಕಥನಗಳ ವಸ್ತು, ಅನನ್ಯತೆ ಮತ್ತು ಭಿನ್ನತೆ

ಅಧ್ಯಾಯ 6. ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಯನದ ಸಾಧ್ಯತೆಗಳು

ಅನುಬಂಧ:

1. ಆತ್ಮಕಥನಗಳ ಛಾಯಾಚಿತ್ರಗಳು

2. ಗ್ರಂಥ ಋಣ

ಆಕರ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಅಧ್ಯಾಯ 1.

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ:

'ಮಂಗನಿಂದ ಮಾನವ'. ಮನುಷ್ಯ ಮೂಲತಃ ಪ್ರಾಣಿ; ಆದರೂ ಆಲೋಚನ ಶಕ್ತಿ, ಮಾತನಾಡುವ ಶಕ್ತಿ ಮತ್ತು ಭಾವನಜೀವಿ ಈ ಕಾರಣಗಳಿಂದಾಗಿ ಮನುಷ್ಯ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ ಮತ್ತು ಬುದ್ಧಿಜೀವಿಯಾಗಿದ್ದಾನೆ. ಆರಂಭದಲ್ಲಿ ಮನುಷ್ಯ ಸಂಕೇತ ಮತ್ತು ಸಂಜ್ಞೆ ಇವನ್ನು ತನ್ನ ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಮಾಧ್ಯಮವಾಗಿಸಿಕೊಂಡು ನಂತರ ಭಾಷೆಯನ್ನು ಕಂಡುಕೊಂಡ. ಚಿಂತನೆ, ಆಲೋಚನೆ ಮತ್ತು ಜೀವನಾನುಭವದ ವಿಶಿಷ್ಟ ಅಭಿವ್ಯಕ್ತಿಯೇ ಸಾಹಿತ್ಯ ರೂಪತಾಳಿತು. ಮೊದಲಿಗೆ ಮೌಕಿಕ ತದನಂತರ ಅಕ್ಷರ ರೂಪಕ್ಕೆ ಮಾರ್ಪಡಿಸಲಾಯಿತು. ಈ ಸಾಹಿತ್ಯವು ಕಥೆ, ಕಾವ್ಯ, ಕಾದಂಬರಿ, ವಿಮರ್ಶೆ, ಪ್ರಬಂಧ ಹೀಗೆ ಹಲವಾರು ಪ್ರಕಾರಗಳಲ್ಲಿ ಹರವಿತು. ಈ ಎಲ್ಲಾ ಸಾಹಿತ್ಯವನ್ನು ಸೃಷ್ಟಿಸಿದ ಮನುಷ್ಯ ತನ್ನ ಬದುಕಿನ ಕುರಿತಾಗಿ ನೆನಪುಗಳನ್ನು ಮೆಲಕು ಹಾಕಿದ ಅದುವೇ ಆತ್ಮಾವಲೋಕನ. ಹೀಗೆ ಮನುಷ್ಯ ತನ್ನ ಬದುಕಿನ ಕಥೆಯನ್ನು ತಾನೇ ಬರೆದುಕೊಂಡ ಅದೇ ಆತ್ಮ ಚರಿತ್ರೆ, ಆತ್ಮಕಥನ ಸಾಹಿತ್ಯ ರೂಪ ಪಡೆಯಿತು.

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಆತ್ಮಕಥೆಯು ಒಂದಾಗಿದೆ. ಈ ಆತ್ಮಕಥೆಗಳ ಮೂಲ ಯೂರೋಪಿನ ಆತ್ಮ ನಿವೇದನೆಯಿಂದ ಹುಟ್ಟಿದ್ದು. ಇದಕ್ಕೆ ಕಾರಣ ಕ್ರೈಸ್ತ ಮತದಲ್ಲಿ ತಾವು ಮಾಡಿದ ಪಾಪವನ್ನು ದೇವರ ಹತ್ತಿರ ನಿವೇದನೆ ಮಾಡಿಕೊಂಡರೆ ಕ್ಷಮಿಸುವನು ಎಂದು ನಂಬಿಕೆ. ಆದ್ದರಿಂದ ತಾವು ಮಾಡಿದ ಪಾಪ ಕಾರ್ಯಗಳನ್ನು ಕ್ಷಮಾರ್ಪಣಾ ಪತ್ರದಲ್ಲಿ ಬರೆದು ಚರ್ಚಿನ ಪೋಪನಿಗೆ ನೀಡುತ್ತಿದ್ದರು. ಕ್ಷಮಾರ್ಪಣಾ ಪತ್ರವೇ ಮುಂದಿನ ದಿನಗಳಲ್ಲಿ ಆತ್ಮಕಥೆಯ ಸ್ವರೂಪ ಪಡೆಯಿತು.

19ನೇ ಶತಮಾನದ ಮಧ್ಯದವರೆಗೂ ಭಾರತೀಯ ಸಾಹಿತ್ಯದಲ್ಲಿ ಆತ್ಮಕಥೆ ಎಂದು ಪರಿಗಣಿಸುವ ಮಾದರಿ ಇರಲಿಲ್ಲ. ಮುಂದೆ ಪಾಶ್ಚತ್ಯರಿಂದ ಪ್ರತಿಯೊಂದು ಭಾಷೆಯಲ್ಲಿಯೂ ಆತ್ಮಕಥೆ ಹೇರಳವಾಗಿ ಬೆಳೆಯಿತು. ಆತ್ಮಕಥೆ ಬರೆಯುವುದು ಅಷ್ಟು ಸುಲಭದ ಕೆಲಸವಲ್ಲ. ಆತ್ಮಕಥೆ ವೈಯಕ್ತಿಕ ಬದುಕನ್ನು ದಾಖಲಿಸುವುದರ ಜೊತೆಗೆ ತನ್ನ ಕಾಲ, ತನ್ನ ಸುತ್ತಲಿನ ಸಮಾಜ, ಪರಿಸರವನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಮಹಿಳೆಯರಿಗೆ ಆತ್ಮಕಥೆ ಬರೆಯುವುದು ಸುಲಭದ ಕೆಲಸವಾಗಿರಲಿಲ್ಲ. ಈ ವಿಚಾರಕ್ಕೆ ಸಾರಾ ಅಬೂಬಕ್ಕರ್ ಅವರ ಮಾತು ಪೂರಕವಾಗಿದೆ. "ತಾವು ಕಂಡುಂಡ ಬದುಕನ್ನು ಇತರರ ಮುಂದೆ ಪ್ರಾಮಾಣಿಕವಾಗಿ ಬಿಚ್ಚಿಡಲು ಮಹಿಳೆಯರಿಗೆ ಸುಲಭದಲ್ಲಿ ಸಾಧ್ಯವಾಗುವುದಿಲ್ಲ"1 ಎಂದು. ಅದೇ ರೀತಿಯಾಗಿ ವಸುಮತಿ ಉಡುಪ ಅವರ ಹೇಳಿಕೆ ಇನ್ನಷ್ಟು ಪುಷ್ಟಿ ಕೊಡುತ್ತದೆ. "ತಮ್ಮ ಅನುಭವಗಳನ್ನು ನಿಸ್ಸಂಕೋಚವಾಗಿ, ನಿರ್ಭೀತವಾಗಿ ಹೇಳಿಕೊಳ್ಳುವ ಗಟ್ಟಿತನ ಮೊದಲ ಅವಶ್ಯಕತೆ.

ಲೇಖಕಿಯರಲ್ಲಿ ಈ ಗಟ್ಟಿತನ ಎಷ್ಟಿದೆ? ಇಲ್ಲದಿದ್ದರೆ ಯಾಕಿಲ್ಲ? ಲೇಖಕಿಯರ ಆತ್ಮಕಥೆ ಅಪರೂಪವಾಗಿರುವುದರಿಂದ ಅವರ ಮಾನಸಿಕ ಹಿಂಜರಿಕೆ ಲಗಾಮು ಹಿಡಿದು ಅವರನ್ನು ನಿರ್ದೇಶಿಸುತ್ತಿದ್ದಾರೆ ಎನ್ನುವುದು ವಾಸ್ತವ ವಿಚಾರ"2 ಎನ್ನುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಹಿಳಾ ಆತ್ಮಕಥನಗಳಲ್ಲಿ ವಿಭಿನ್ನ ನೆಲೆಗಳ ಕುರಿತು ಸಂಶೋಧಿಸಿಲಾಗುವುದು.

1.1. ಉದ್ದೇಶ:

ಕನ್ನಡದಲ್ಲಿ ಮಹಿಳಾ ಆತ್ಮಕಥನಗಳ ಕುರಿತು ಅಧ್ಯಯನ ಆಗಿರುವುದು ವಿರಳ. ಪುರುಷ ಪ್ರಧಾನ ಸಮಾಜದಲ್ಲಿ ಬೆಳೆದು ಬಂದಿರುವ ಮಹಿಳೆಯ ಅಂತರಂಗವನ್ನು ತೆರೆದಿಡುವ ಮಹಿಳಾ ಆತ್ಮಕಥೆಗಳು ತನ್ನದೇ ಆದ ವಿಶಿಷ್ಟತೆಯಿಂದ ಕೂಡಿವೆ. ಈ ಆತ್ಮಕಥನಗಳು ಮಹಿಳೆಯರ ಬಾಳಿನ ವಿವಿಧ ಆಯಾಮಗಳನ್ನು ನಮ್ಮ ಮುಂದೆ ಅನಾವರಣಗೊಳಿಸುತ್ತವೆ. ಕಾಲದಿಂದ ಕಾಲಕ್ಕೆ ಮಹಿಳೆಯರ ಅನುಭವ, ಅಭಿವ್ಯಕ್ತಿ, ಸಂವೇದನೆಗಳು ವಿವಿಧ ರೂಪಗಳನ್ನು ತಾಳುತ್ತವೆ. ಇವೆ ಆತ್ಮಕಥನಗಳಲ್ಲಿ ಬಿಂಬಿತವಾಗುತ್ತವೆ. ಇವುಗಳ ವಿಭಿನ್ನ ನೆಲೆಗಳ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಆಧುನಿಕ ಚಿಂತನ ಹಾದಿಯಲ್ಲಿ ಮಹಿಳೆಯ ಅಸ್ತಿತ್ವವನ್ನು ಶೋಧಿಸುವ ಹೊಸ ದೃಷ್ಟಿಕೋನದ ಸ್ತ್ರೀವಾದಿ ನೆಲೆಯಲ್ಲಿ ಆತ್ಮಕಥನಗಳ ಅಧ್ಯಯನವಾಗಬೇಕು. ಪುರುಷರ ಇತಿಹಾಸದಲ್ಲಿ ಕಳೆದು ಹೋದ ಮಹಿಳೆಯರ ಇತಿಹಾಸವನ್ನು ಪುನರ್ ಸ್ಥಾಪಿಸುವ ಕೆಲಸ ಅಗತ್ಯ. ಈ ಹಿನ್ನೆಲೆಯಲ್ಲಿ ಮಹಿಳೆಯರೇ ರಚಿಸಿದ ಅವರದೇ ಇತಿಹಾಸವನ್ನು ಕಟ್ಟಿರುವ ಆತ್ಮಕಥೆಗಳಲ್ಲಿ ಮೇಲ್ನೋಟಕ್ಕೆ ನೋವುಗಳು, ಅಪಮಾನಗಳು ಕಂಡರು ಇವುಗಳ ಹಿಂದೆ ಸೂಕ್ಷ್ಮವಾಗಿ ಸ್ತ್ರೀ ಸಬಲೀಕರಣದ ದಿಟ್ಟ ಹೆಜ್ಜೆಯನ್ನು ಕಾಣಲು ಸಾಧ್ಯ ಎನ್ನುವುದು ಮಹಿಳಾ ಆತ್ಮಕಥನಗಳ ಅಧ್ಯಯನದ ಉದ್ದೇಶವಾಗಿದೆ.

1.2. ವ್ಯಾಪ್ತಿ :

ಅಧ್ಯಯನದ ದೃಷ್ಟಿಯಿಂದ ನಿರ್ದಿಷ್ಟ ವ್ಯಾಪ್ತಿಯನ್ನು ಹಾಕಿಕೊಳ್ಳಲಾಗಿದೆ. 21ನೇ ಶತಮಾನೊತ್ತರ ಪ್ರಾತಿನಿಧಿಕ ಮಹಿಳಾ ಆತ್ಮಕಥನಗಳು ಮತ್ತು ಅನುವಾದಿತ ಪ್ರಾತಿನಿಧಿಕ ಮಹಿಳಾ ಆತ್ಮಕಥಗಳು. ಇನ್ನು ಕೆಲವು ಆತ್ಮ ಕಥೆಗಳನ್ನು ಆನುಷಂಗಿಕವಾಗಿ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅಧ್ಯಾಯಗಳ ಉಪವಿಭಾಗಗಳ ವ್ಯಾಪ್ತಿಗೆ ಸಂಬಂಧಪಟ್ಟಂತೆ ವಿಷಯ ಪ್ರಾಧ್ಯಾನವಿಲ್ಲದ ಆತ್ಮಕಥನಗಳನ್ನು ಕೈಬಿಡಲಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಆತ್ಮಕಥನಕ್ಕೆ ಸಂಬಂಧವಾದ ಬಿಡಿ ಬರಹಗಳು, ಸ್ತ್ರೀವಾದಿ ವಿಮರ್ಶಾ ಕೃತಿಗಳು, ಆತ್ಮವೃತ್ತಾಂತಗಳು, ಪತ್ರಿಕಾ ಲೇಖನ, ಅರ್ಥಕೋಶ, ಅಂತರ್ಜಾಲ– ಇವುಗಳನ್ನೆಲ್ಲ ಸಾಂಧರ್ಭಿಕವಾಗಿ ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗುವುದು.

1.3. ಮಹತ್ವ:

ಮಹಿಳಾ ಆತ್ಮಕಥನಗಳು ಆತ್ಮಕಥನಕಾರ್ತಿಯರ ಬದುಕಿನ ವಿವರದ ಜೊತೆಗೆ ಅವರ ಸುತ್ತಲಿನ ವರ್ತಮಾನದ ಸ್ಥಿತಿ, ಸಾಮಾಜಿಕ, ಸಾಂಸ್ಕೃತಿಕ ವಿಶ್ಲೇಷಣೆಗಳನ್ನು ಒಳಗೊಂಡಿರುತ್ತದೆ. ಎಲ್ಲವನ್ನು ಅನುಭವಿಸಿ ಪಾಠ ಕಲಿಯಬೇಕಾಗಿಲ್ಲ; ಕೆಲವೊಂದನ್ನು ನೋಡಿ, ತಿಳಿದು ಕಲಿಯಬೇಕಾಗುತ್ತದೆ. ಅಂತಹ ಕಥನಗಳನ್ನು ಈ ಮಹಿಳಾ ಆತ್ಮಕಥನಗಳು ಒಳಗೊಂಡಿವೆ. ಲೇಖಕಿಯರು ಜೀವನ ಹೋರಾಟದಲ್ಲಿ ಸೋಲಿಗೆ ಕುಗ್ಗದೆ ಬಂದ ಸಮಸ್ಯೆಗಳನ್ನು ಎದುರಿಸಿರುವ ಪರಿಯನ್ನು ಇಲ್ಲಿ ಕಾಣಬಹುದು. ಹೀಗೆ ಸಮಸ್ಯೆಗಳನ್ನು, ಸಂಕಷ್ಟಗಳನ್ನು ನಿರಂತರವಾಗಿ ಎದುರಿಸುವ ಮೂಲಕ ಗಟ್ಟಿತನ ಪ್ರಾಪ್ತವಾದುದ್ದಕ್ಕೆ

ಆತ್ಮಕಥನಗಳಲ್ಲಿ ಹಲವು ನಿದರ್ಶನಗಳಿವೆ. ಆ ಗಟ್ಟಿತನವೆ ಜೀವನ ಉತ್ಸಾಹಕ್ಕೆ ಪ್ರೀತಿಯನ್ನು ಉಂಟುಮಾಡಿದೆ. ಇಂತಹ ಆತ್ಮಕಥೆಗಳ ಅಧ್ಯಯನದಿಂದ ಕಲಿತು ಕೊಳ್ಳಬೇಕಾಗಿದೆ. ಈ ಆತ್ಮಕಥನಕಾರ್ತಿಯರ ಜೀವನ, ಸಾಧನೆ, ಕಾರ್ಯ, ಆತ್ಮಸ್ಥೈರ್ಯ, ಗಟ್ಟಿತನ ಪ್ರಸ್ತುತ ಕಾಲಕ್ಕೆ ಆದರ್ಶ ಮತ್ತು ದಾರಿದೀಪವಾಗಬಹುದು.

1.4. ಅಧ್ಯಯನದ ವಿಧಾನ:

ಕನ್ನಡ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳನ್ನು ವಿವರಣಾತ್ಮಕ, ವಿಶ್ಲೇಷಣಾತ್ಮಕ, ವ್ಯಾಖ್ಯಾನಮುಖಿ ಮತ್ತು ಚಾರಿತ್ರಿಕ ವಿಧಾನದ ಮೂಲಕ ಅಧ್ಯಯನ ಕೈಗೊಳ್ಳಲಾಗುವುದು.

1.5. ಅಧ್ಯಯನದ ಸ್ವರೂಪ:

ಕನ್ನಡ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳನ್ನು ಪ್ರಾತಿನಿಧಿಕ ಕೃತಿಗಳನ್ನು ಅನುಲಕ್ಷಿಸಿ ಈ ಪ್ರಬಂಧದಲ್ಲಿ ಪ್ರಸ್ತಾವನೆಯಿಂದ ಆರಂಭಗೊಂಡು ಸಮಾರೋಪದವರೆಗೆ ಒಟ್ಟು ಆರು ಅಧ್ಯಾಯಗಳಿವೆ.

ಅಧ್ಯಾಯ 1. ಈ ಅಧ್ಯಾಯದಲ್ಲಿ ಸಂಶೋಧನೆಯ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ, ಸ್ವರೂಪ ಮತ್ತು ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಕೈಗೊಳ್ಳಲಾಗುವುದು.

ಅಧ್ಯಾಯ 2. ಈ ಅಧ್ಯಾಯದಲ್ಲಿ ಆತ್ಮಕಥನಗಳ ಇತಿಹಾಸ ಮತ್ತು ಸ್ವರೂಪದ ಕುರಿತು ವಿವರಿಸಲಾಗುವುದು.

ಅಧ್ಯಾಯ 3. ಈ ಅಧ್ಯಾಯದಲ್ಲಿ 21ನೇ ಶತಮಾನೊತ್ತರ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳ ಕುರಿತು ವಿಶ್ಲೇಷಿಸಲಾಗುವುದು.

ಅಧ್ಯಾಯ 4. ಈ ಅಧ್ಯಾಯದಲ್ಲಿ ಅನುವಾದಿತ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳ ಕುರಿತು ವಿಶ್ಲೇಷಿಸಲಾಗುವುದು.

ಅಧ್ಯಾಯ 5. ಈ ಅಧ್ಯಾಯದಲ್ಲಿ ಮಹಿಳಾ ಆತ್ಮಕಥನಗಳ ವಸ್ತು, ಭಾಷೆ ಮತ್ತು ಶೈಲಿಯ ಕುರಿತು ವಿಶ್ಲೇಷಿಸಲಾಗುವುದು.

ಅಧ್ಯಾಯ 6. ಈ ಅಧ್ಯಾಯದಲ್ಲಿ ಸಮಾರೋಪದ ಜೊತೆಗೆ ಅಧ್ಯಯನದ ಫಲಿತಗಳು ಮತ್ತು ಅಧ್ಯಯನದ ಸಾಧ್ಯತೆಗಳು ಕುರಿತು ವಿವರಿಸಲಾಗುವುದು.

1.6. ಪೂರ್ವಾಧ್ಯಯನಗಳ ಸಮೀಕ್ಷೆ:

ಮಹಿಳಾ ಆತ್ಮಕಥನಗಳ ಅಧ್ಯಯನಕ್ಕೆ ಸಂಬಂಧಿಸಿದಹಾಗೆ ಕನ್ನಡದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿಲ್ಲ ಎನ್ನಬಹುದು.

- ಶೈಲಜಾ. ಕೆ ಅವರು 'ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳು: ಸ್ವನಿರೂಪಣೆಯ ಒಂದು ಅಧ್ಯಯನ' 2013.

ಅಭಿವೃದ್ಧಿ ಹೊಂದಿದ ಅಭಿವೃದ್ಧಿಶೀಲ ರಾಷ್ಟ್ರಗಳೆರಡರಲ್ಲೂ ಮಹಿಳೆ ಹಿಂದಿನ ಕಾಲದಿಂದಲೂ ಕ್ರೌರ್ಯಕ್ಕೆ ಹಾಗೂ ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ. ಕೆಲವೊಮ್ಮೆ ಅವುಗಳನ್ನು ತಡೆಯುವಲ್ಲಿ ಪ್ರತಿಭಟಿಸುವಲ್ಲಿ ನಡೆಯುವ ವಿದ್ಯಮಾನಗಳನ್ನು ನೋಡಿದರೆ ಮಹಿಳೆ ಆಶಾವಾದಿಯಾಗಿದ್ದಾಳೆ ಎನಿಸಬಹುದಾದರೂ ಬಡತನ, ಅಜ್ಞಾನ, ಕುಡುಕುತನ,

ಲಾಟರಿ, ಕೋಮುವಾದ, ಹಿಂಸೆ ಈ ಎಲ್ಲಾ ವಿಷಯಗಳಲ್ಲೂ ತನ್ನ ಮನೆಯ, ಮಕ್ಕಳ ಬದುಕು ಕಟ್ಟಿಕೊಡುವಲ್ಲಿ ಹೆಣಗಾಡುವವಳು ಮಹಿಳೆಯೇ ಆಗಿರುತ್ತಾಳೆ ಎನ್ನುವುದು ಕುರಿತು ಅಧ್ಯಯನ ಮಾಡಲಾಗಿದೆ.

• ಉಷಾ ಡಿ.ಕೆ ಅವರು 'ಕನ್ನಡದ ಮಹಿಳಾ ಆತ್ಮಕಥೆಗಳು' 2020.

• ದೇವೇಂದ್ರಮ್ಮ ಅವರು 'ಕನ್ನಡದಲ್ಲಿ ಮಹಿಳಾ ಆತ್ಮಕಥನಗಳು' (ಪ್ರಾತಿನಿಧಿಕ ಕೃತಿಗಳನ್ನು ಅನುಲಕ್ಷಿಸಿ)2022.

ಹೆಣ್ಣನ್ನು ಯಾವಾಗಲೂ ದುರ್ಬಲ ಎಂದು ಪರಿಗಣಿಸಿ, ಆಕೆಯನ್ನು ತುಚ್ಛವಾಗಿ ಕಾಣುವ ಪ್ರವೃತ್ತಿ ಹೆಚ್ಚಾಗಿ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಯಾವುದೇ ಕ್ಷೇತ್ರದಲ್ಲಿ ಆಕೆ ನಿರ್ಭಯವಾಗಿ ಹೆಚ್ಚು ಹೆಚ್ಚು ಕ್ರಿಯಾಶೀಲಳಾಗಿದ್ದಾಳೆ. ಸಮಸ್ಯೆಗಳು ಮಹಿಳೆಯ ಸುತ್ತಲೇ ಸುತ್ತುತ್ತವೆ. ಮಹಿಳೆ ಇಂದಿಗೂ ಅವುಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಆದರೆ ಒಂದಿಷ್ಟು ಆಶಯವನ್ನು ಹೊಂದಿದ್ದಾಳೆ. ಮಹಿಳಾ ಆತ್ಮಕಥನಗಳು ಹೇಗೆಲ್ಲಾ ಭಿನ್ನವಾಗಿ ನಿಲ್ಲುತ್ತವೆ ಎಂಬುದರ ಬಗ್ಗೆ ಮತ್ತು ಮಹಿಳಾ ಆತ್ಮಕಥನಗಳ ಪ್ರಸ್ತುತ ಮಹತ್ವದ ಕುರಿತು ಅಧ್ಯಯನ ಮಾಡಲಾಗಿದೆ.

• ನಾಗೇಶ ನಾಯಕ ಅವರು 'ಸ್ವತಂತ್ರ ಮತ್ತು ಅನುವಾದಿತ ಮಹಿಳಾ ಆತ್ಮಕಥೆಗಳ ತೌಲನಿಕ ಅಧ್ಯಯನ' 2023.

ಮಹಿಳಾ ಆತ್ಮಕಥೆಗಳು ಯಶೋಗಾಥೆಗಳಾಗಿವೆ. ತಮ್ಮ ಮುಂದಿದ್ದ ಅಡೆತಡೆಗಳನ್ನು ದಾಟಿ ಜೀವನದ ಗುರಿಯ ಕಡೆ ಸಾಗಬೇಕಾದರೆ ಹಲವು ಬಗೆಯ ಅನಾನುಕೂಲಕರವಾದ ಪರಿಸ್ಥಿತಿಗಳಿಗೆ ಮುಖಾಮುಖಿಯಾಗಿದ್ದಾರೆ. ಜೀವನದ ಹೋರಾಟದಲ್ಲಿ ಸಾಕಷ್ಟು ಪಡೆದಿದ್ದಾರೆ; ಹಾಗೆಯೇ ಕಳೆದುಕೊಂಡಿದ್ದೂ ಇದೆ. ಆದರೆ ಅವರ ಜೀವನ ಹೋರಾಟದಲ್ಲಿ ಸೋಲಿಗೆ ಕುಗ್ಗದೆ, ಸಂತಸಕ್ಕೆ ಹಿಗ್ಗದೆ ಬಂದ ಸಮಸ್ಯೆಯನ್ನು ಎದುರಿಸಿರುವ ಪರಿ ಗಮನಾರ್ಹವಾಗಿದೆ. ಹೀಗೆ ಸಮಸ್ಯೆಗಳನ್ನು, ಸಂಕಷ್ಟಗಳನ್ನು ನಿರಂತರವಾಗಿ ಎದುರಿಸಿರುವ ಮೂಲಕ ಗಟ್ಟಿತನ ಪ್ರಾಪ್ತವಾಗಿದೆ. ಜೀವನದ ಸಂಕಷ್ಟಗಳ ವಿರುದ್ಧ ಹೋರಾಡಿ ಗೆದ್ದ ಲೇಖಕಿಯರ ಜೀವನ, ಕಾರ್ಯ, ಸಾಧನೆ ಇಂದಿನ ಯುವ ಜನಾಂಗಕ್ಕೆ ಆದರ್ಶ, ದಾರಿದೀಪ ಮತ್ತು ಜೀವನ ಪಾಠವನ್ನು ಹೇಳಿಕೊಡುತ್ತವೆ. ಇವುಗಳ ಕುರಿತು ಅಧ್ಯಯನ ಮಾಡಲಾಗಿದೆ.

ಹೀಗೆ ಸಂಶೋಧನಾ ಮಹಾಪ್ರಬಂಧವನ್ನು ರಚಿಸಿದ್ದಾರೆ. ಈವರೆಗೆ ಕನ್ನಡದಲ್ಲಿ ನಡೆದ ಅಧ್ಯಯನಗಳನ್ನು ಗಮನಿಸಿದಾಗ ಆತ್ಮಕಥೆಯು ಆತ್ಮಕಥಾಕಾರ್ತಿಯರ ಚರಿತ್ರೆ ಅಲ್ಲದೆ ಅದು ಸಮಕಾಲಿನ ಚರಿತ್ರೆಯೂ ಕೂಡ ಆಗಿರುತ್ತದೆ; ಸಮಕಾಲಿನ ಸಂದರ್ಭ ಸನ್ನಿವೇಶಗಳನ್ನು ಎಷ್ಟರಮಟ್ಟಿಗೆ ಕಟ್ಟಿಕೊಟ್ಟಿದೆ ಎನ್ನುವುದನ್ನು ಗ್ರಹಿಸಲಾಗಿದೆ. ಮಹಿಳಾ ಆತ್ಮಕಥೆಗಳಲ್ಲಿ ಬರೀ ನೋವು, ನಿರಾಶೆ, ಆತಂಕ, ಅಪಮಾನ, ಬಡತನ, ಹಸಿವು ಅಷ್ಟನ್ನೇ ಹೇಳುತ್ತಿಲ್ಲ ಬದಲಿಗೆ ಸೂಕ್ಷ್ಮವಾಗಿ ಸ್ತ್ರೀ ಸಬಲೀಕರಣದ ಛಾಯೆ ಮೂಡಿಸುತ್ತಿವೆ ಎನ್ನುವುದರ ಕುರಿತು ಈವರೆಗೆ ನಡೆದ ಅಧ್ಯಯನಗಳು ಅಷ್ಟಾಗಿ ಗಮನ ಹರಿಸಿಲ್ಲ ಎನ್ನಬಹುದು. ಈ ನಿಟ್ಟಿನಲ್ಲಿ 'ಕನ್ನಡ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳು' ಎಂಬ ಮಹಾ ಪ್ರಬಂಧವು ಆಶಾದಾಯಕವಾದ ಪ್ರಯತ್ನವೆನ್ನಬಹುದು.

ಅಧ್ಯಾಯ 2: ಆತ್ಮಕಥನಗಳ ಇತಿಹಾಸ ಮತ್ತು ಸ್ವರೂಪ

2.1. ಆತ್ಮಕಥನದ ಅರ್ಥ:

ಇಂಗ್ಲಿಷ್ ನ 'Autobiography' ಎನ್ನುವ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಆತ್ಮಕಥೆ, ಆತ್ಮಕಥನ, ಆತ್ಮಚರಿತ್ರೆ, ಆತ್ಮವೃತ್ತ, ಜೀವನವೃತ, ಜೀವನ ಕಥನ, ಅನುಭವ ಕಥನ, ನೆನಪುಗಳು ಎನ್ನುವ ಪದಗಳು ಬಳಕೆಯಲ್ಲಿವೆ. ಆತ್ಮಕಥೆ, ಆತ್ಮಕಥನ, ಆತ್ಮಚರಿತ್ರೆ ಎಂಬ ಪದಗಳು ಹೆಚ್ಚು ಬಳಕೆಯಲ್ಲಿವೆ.

2.2. ಆತ್ಮಕಥನಗಳ ರಚನೆಯ ಉದ್ದೇಶ:

• ತಮ್ಮ ಪರಿಸರದ ಸಮಾಜದ ವಿದ್ಯಮಾನಗಳನ್ನು, ಸಂಸ್ಕೃತಿಯನ್ನು ದಾಖಲಿಸುವ ಇಚ್ಛೆ.

• ನೋವು, ಹಸಿವು, ಬಡತನ, ಜಾತಿಯತೆ, ಬದುಕಿನಲ್ಲಿ ಎದುರಿಸಿದ ಬಿಕ್ಕಟ್ಟುಗಳು ಇವೆಲ್ಲವುಗಳನ್ನು ಎದುರಿಸಿಯೂ ತಾನು ಬೆಳೆದುದರ ಬಗ್ಗೆ.

• ಆತ್ಮಕಥೆಗಳ ಓದು ಬದುಕನ್ನು ವಿಸ್ತಾರ ಮಾಡುವುದು ಎಂಬ ದೃಷ್ಟಿಕೋನದಿಂದ ಮತ್ತು ತಮ್ಮನ್ನು ಬರವಣಿಗೆಯ ಜಗತ್ತಿನಲ್ಲಿ ದಾಖಲಿಸಿಕೊಳ್ಳಬೇಕೆಂಬ ಹಂಬಲದಿಂದ.

ಈ ಎಲ್ಲಾ ಕಾರಣಗಳಿಂದ ಆತ್ಮಕಥೆಗಳು ರಚನೆಯಾಗಿರಬಹುದು.

2.3. ಆತ್ಮಕಥನದ ಸ್ವರೂಪ:

ಪತ್ರಗಳು, ದಿನಚರಿ, ಜರ್ನಲ್ಗಳು, ಬಖೈರುಗಳು, ವೈಯಕ್ತಿಕ ಪ್ರಬಂಧಗಳು, ಅನುಭವ ಕಥನದ ತುಣುಕುಗಳು, ಪ್ರವಾಸ ಕಥನಗಳು, ಡೈರಿ/ದಿನಚರಿಗಳ ಬರವಣಿಗೆಗಳು ಆತ್ಮಕಥೆಯ ವರ್ಗಕ್ಕೆ ಸೇರುತ್ತವೆ.

2.4. ಆತ್ಮಕಥನಗಳ ಆರಂಭಕಾಲ:

ಪಾಶ್ಚಾತ್ಯ ಸಾಹಿತ್ಯದಲ್ಲಿ ಆತ್ಮಕಥೆಗಳು ಆರಂಭವಾಗಿದ್ದು ಸುಮಾರು 5000 ವರ್ಷಗಳ ಹಿಂದೆ ಈಜಿಪ್ಟ್ ದೊರೆಗಳು ತಮ್ಮ ಸಮಾಧಿಗಳಲ್ಲಿ ಆತ್ಮಕಥನ ಸಂಬಂಧವಾದ ದಾಖಲೆಗಳನ್ನಿರಿಸಲು ವ್ಯವಸ್ಥೆ ಮಾಡಿದ್ದುಂಟು. ಆತ್ಮಪ್ರಶಂಸೆಯೇ ಅವುಗಳ ಗುರಿಯಾಗಿತ್ತು. ಹೀಗೆ ಆರಂಭವಾಗಿ ಆತ್ಮಕಥನ ಒಂದು ಪ್ರಕಾರವಾಗಿ ಪಾಶ್ಚತ್ಯ ಸಾಹಿತ್ಯದಲ್ಲಿ 18ನೇ ಶತಮಾನದಿಂದ ಕಾಣಿಸಿಕೊಂಡಿತು. ಭಾರತೀಯ ಸಾಹಿತ್ಯದಲ್ಲಿ ಆತ್ಮಕಥೆಗಳು ಒಂದು ಪ್ರಕಾರವಾಗಿ ಕಾಣಿಸಿಕೊಂಡು ಬೆಳೆದಿದ್ದು 19–20ನೇ ಶತಮಾನದಲ್ಲಿ.

2.5. ಕನ್ನಡದಲ್ಲಿ ಮಹಿಳಾ ಆತ್ಮಕಥನಗಳ ಆರಂಭಕಾಲ:

1975ರಲ್ಲಿ ರಚನೆಯಾದ ಮಳವಳ್ಳಿ ಸುಂದರಮ್ಮ ನವರ 'ಅಭಿನಯ ವಿಶಾರದೆ'. ರಂಗಭೂಮಿ ಕಲಾವಿದೆಯರಲ್ಲಿ ರಚನೆಯಾದ ಕನ್ನಡದ ಮೊದಲ ಮಹಿಳಾ ಆತ್ಮಕಥೆ. ನಂತರದ ದಿನಮಾನಗಳಲ್ಲಿ ಲೇಖಕಿಯರ, ಕಲಾವಿದೆಯರು,ದಲಿತ ಮಹಿಳೆಯರ, ಸಮಾಜದ ಅಂಚಿನಲ್ಲಿ ಉಳಿದ ಮಹಿಳೆಯರ, ತೃತೀಯ ಲಿಂಗಿಗಳ, ಲೈಂಗಿಕ ಕಾರ್ಯಕರ್ತೆಯರ, ಸಾಮಾಜಿಕ ಕಾರ್ಯಕರ್ತೆಯರ, ಶ್ರಮಿಕ ವರ್ಗದ ಮಹಿಳೆಯರ ಕುರಿತು ಹಲವು ಆತ್ಮಕಥನಗಳು ರಚನೆಯಾದವು. ಈಗ ಸುಮಾರು ನೂರರ ಗಡಿ ದಾಟಿವೆ.

2.6. ಆತ್ಮಕಥನ ರಚನೆಗೆ ಪ್ರೇರಣೆಗಳು:

ಯಾವುದೇ ಕಾರ್ಯ ಸಾಧನೆಯನ್ನು ಮಾಡಬೇಕಾದರೂ ಅದಕ್ಕೆ ಒತ್ತಾಸೆ, ಪ್ರೇರಣೆಗಳು ಇಲ್ಲದೇ ನಡೆಯಲಾರದು. ಪ್ರೇರಣೆಯೇ ಮಾನವರು ಜಗತ್ತಿನಲ್ಲಿ ಅಸಾಮಾನ್ಯವಾದ ಸಾಧನೆಯನ್ನು ಮಾಡಲು ಕಾರಣವಾಗಿದೆ. ಅದೇ ರೀತಿ ಸಾಹಿತ್ಯ ರಚನೆಗಳು ಕೂಡ. ತಮಗೆ ಆತ್ಮಕಥೆಯನ್ನು ಬರೆಯಲು ಒದಗಿಸಿದ ಪ್ರೇರಣೆಗಳನ್ನು ಹಲವು ಲೇಖಕಿಯರು ಹೇಳಿಕೊಂಡಿದ್ದಾರೆ. ತಮ್ಮ ಮನಸ್ಸಿನ ತುಮುಲಗಳನ್ನು ಗೀಚಿ ಶಾಂತವಾಗಿರಿಸಿಕೊಳ್ಳುವ, ಸಂತೋಷಗೊಳಿಸಿಕೊಳ್ಳುವ ಆಂತರಿಕ ಒತ್ತಾಯಗಳು ಮತ್ತು ಬಾಹ್ಯ ಕಾರಣವಾದ ಸ್ನೇಹಿತರ, ಸಹವರ್ತಿಗಳ, ಕುಟುಂಬದ ಸದಸ್ಯರ ಒತ್ತಾಯ ಕೂಡ ಆತ್ಮಕಥನ ರಚನೆಗೆ ಪ್ರೇರಣೆ ಆಗಿವೆ.

ಅಧ್ಯಾಯ 3: 21ನೇ ಶತಮಾನೊತ್ತರ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳು

21ನೇ ಶತಮಾನೊತ್ತರ ಎಲ್ಲಾ ಮಹಿಳಾ ಆತ್ಮಕಥನಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳುವುದು ಅಸಾಧ್ಯ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಾಯದ ಉಪವಿಭಾಗಗಳ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಚರ್ಚೆಯ ಮತ್ತು ಅನುಕೂಲತೆಯ ದೃಷ್ಟಿಯಿಂದ ಪ್ರಾತಿನಿಧಿಕ ಆತ್ಮಕಥನಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ಆತ್ಮಕಥನಗಳನ್ನು ಶೈಕ್ಷಣಿಕ ನೆಲೆ, ಕೌಟುಂಬಿಕ ನೆಲೆ, ಸಾಮಾಜಿಕ ನೆಲೆ, ಪುರುಷ ಯಾಜಮಾನಿಕೆ ನೆಲೆ, ಅಧಿಕಾರದ ಹಕ್ಕುಗಾರಿಕೆ ನೆಲೆ ಎಂದು ಉಪವಿಭಾಗಗಳಾಗಿ ಮಾಡಿಕೊಂಡು ಸಂಶೋಧಿಸಲಾಗುವುದು.

ಅಧ್ಯಾಯ 4: ಅನುವಾದಿತ ಮಹಿಳಾ ಆತ್ಮಕಥನಗಳ ವಿಭಿನ್ನ ನೆಲೆಗಳು

ಅನ್ಯ ಭಾಷೆಯಿಂದ ಕನ್ನಡಕ್ಕೆ ಅನುವಾದಿತ ಎಲ್ಲಾ ಮಹಿಳಾತ್ಮಕತನಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲು ಅಸಾಧ್ಯ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಾಯದ ಅನುಕೂಲತೆಯ ದೃಷ್ಟಿಯಿಂದ ಪ್ರಾತಿನಿಧಿಕ ಆತ್ಮಕಥನಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ಶೈಕ್ಷಣಿಕ ನೆಲೆ, ಕೌಟುಂಬಿಕ ನೆಲೆ, ಸ್ತ್ರೀಸಬಲೀಕರಣದ ನೆಲೆ, ಪ್ರತಿರೋಧದ ನೆಲೆ, ಸ್ವಾವಲಂಬಿ ನೆಲೆ, ಜಾತಿ ಅಸಮಾನತೆಯ ನೆಲೆ ಮತ್ತು ರಾಜಕೀಯ ಸ್ಥಾನಮಾನಗಳು ಎಂದು ಉಪ ವಿಭಾಗಗಳಾಗಿ ಮಾಡಿಕೊಂಡು ಸಂಶೋಧಿಸಲಾಗುವುದು.

ಅಧ್ಯಾಯ 5: ಮಹಿಳಾ ಆತ್ಮಕಥನಗಳ ವಸ್ತು, ಅನನ್ಯತೆ ಮತ್ತು ಭಿನ್ನತೆ

ಆತ್ಮಕಥನಗಳಲ್ಲಿ ಲೇಖಕರೆ ಕಥೆಯ ನಾಯಕಿ. ಲೇಖಕರ ಬದುಕೆ ಕಥಾ ವಸ್ತುವಾಗಿದೆ. ಆದರೆ ಅವರ ಆಸೆ, ಆಕಾಂಕ್ಷೆ, ಸ್ಥಾನಮಾನಗಳು ವೈವಿಧ್ಯತೆ ಹೊಂದಿವೆ. ಆತ್ಮಕಥನಗಳ ಅನನ್ಯತೆ ಮತ್ತು ಭಿನ್ನತೆಯನ್ನು ಗಮನಿಸಿದಾಗ ಒಬ್ಬೊಬ್ಬರ ಆತ್ಮಕಥನವು ತನ್ನದೇ ಆದ ಭಾಷೆಯಲ್ಲಿ, ತನ್ನದೇ ಆದ ಶೈಲಿಯಲ್ಲಿ ಅನುಭವಗಳನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಕನ್ನಡ ಮಹಿಳಾ ಆತ್ಮಕಥನಗಳಲ್ಲಿ ಮತ್ತು ಅನುವಾದಿತ ಮಹಿಳಾ ಆತ್ಮಕಥನಗಳಲ್ಲಿಅನನ್ಯತೆ ಮತ್ತು ಭಿನ್ನತೆ ಕುರಿತು ಚರ್ಚಿಸಲಾಗುವುದು.

ಅಧ್ಯಾಯ 6: ಸಮಾರೋಪ

ಮಹಿಳಾ ಆತ್ಮಕಥನಗಳನ್ನು ವಿಭಿನ್ನ ನೆಲೆಗಳಲ್ಲಿ ಅಧ್ಯಯನ ಮಾಡಿದಾಗ ಅವರು ಅನುಭವಿಸಿದ ನೋವು, ಬಡತನ, ಅವಮಾನ ಕಂಡರೂ ಇವುಗಳ ಒಳ ಹರಿವು ಸ್ತ್ರೀ ಸಬಲೀಕರಣದ ಎಳೆ ಕೆಲಸ ಮಾಡುತ್ತಿದೆ ಎನ್ನುವ ಸಂಗತಿಗಳನ್ನು ಸಮಾರೋಪದಲ್ಲಿ ವಿವರಿಸಲಾಗುವುದು.

ಅಧ್ಯಯನದ ಫಲಿತಗಳು:

- ಆಧುನಿಕ ಮಹಿಳೆಯ ವೈಚಾರಿಕ ಪ್ರಜ್ಞೆ ಹಾಗೂ ದಿಟ್ಟ ಮನೋಧರ್ಮದಿಂದ ಆಕೆಯ ಖಾಸಗಿ ಬದುಕು ಸಂಘರ್ಷಮಯವಾಗಿರುವ ಬಗ್ಗೆ ವಿವೇಚಿಸಲಾಗುವುದು.
- ಶಿಕ್ಷಣವು ಮಹಿಳೆಯರಲ್ಲಿ ಆತ್ಮವಿಶ್ವಾಸ, ಆತ್ಮಸ್ಥೈರ್ಯ ಮತ್ತು ಸ್ವತಂತ್ರ ಮನೋಭಾವದ ವೃತ್ತಿಗೆ ಸಹಾಯಕವಾಗಿದೆ.
- ಮಹಿಳಾ ಆತ್ಮಕಥನಗಳ ಮುಖ್ಯ ಆಶಯ ಪರಿವರ್ತನಾ ಮೂಲವಾದುದು. ಸ್ತ್ರೀ ವಿಮೋಚನೆಯಲ್ಲಿ ಮಾನವ ಬದುಕಿನ ಸಮಾಜದ ಏಳಿಗೆಯಿದೆ ಎನ್ನುವ ಆಶಯವನ್ನು ಲೇಖಕಿಯರು ಪ್ರತಿಪಾದಿಸಿದ್ದು ಅವರು ನಿರೂಪಣೆಗಳಲ್ಲಿ ಕಾಣಬಹುದು.
- ಪ್ರಸ್ತುತ ಕಾಲದ ಮಹಿಳೆಯರಿಗೆ ಆತ್ಮಸ್ಥೈರ್ಯವನ್ನು ತುಂಬುವ ಕೆಲಸ ಮಾಡಿವೆ.

ಅಧ್ಯಯನದ ಸಾಧ್ಯತೆಗಳು:

- ಸ್ವತಂತ್ರ ಹಾಗೂ ಅನುವಾದಿತ ಮಹಿಳಾ ಆತ್ಮಕಥನಗಳನ್ನು ಪ್ರತ್ಯೇಕವಾಗಿ ಇರಿಸಿ ಅಧ್ಯಯನ ನಡೆಸಬಹುದು.
- ಮಹಿಳೆ ಮತ್ತು ಪುರುಷ ಆತ್ಮ ಕಥನಗಳ ತೌಲನಿಕ ಅಧ್ಯಯನ ನಡೆಸಬಹುದು.
- ಮಹಿಳಾ ಆತ್ಮಕಥನಗಳಲ್ಲಿ ಸ್ತ್ರೀ ಸಬಲೀಕರಣದ ನೆಲೆ, ಪ್ರತಿರೋಧದ ನೆಲೆ, ಸ್ವಾವಲಂಬಿ ನೆಲೆ, ಜಾತಿಯ ಅಸಮಾನತೆ ನೆಲೆ ಮತ್ತು ರಾಜಕೀಯ ಸ್ಥಾನಮಾನಗಳು ಎಂದು ಪ್ರತ್ಯೇಕವಾದ ಅಧ್ಯಯನ ನಡೆಸಬಹುದು.

ಕೊನೆ ಟಿಪ್ಪಣಿ

1. ಸಬಿಹಾ ಭೂಮಿಗೌಡ:'ಮಹಿಳಾ ಆತ್ಮಕತೆಗಳು: ಅನುಸಂಧಾನ', ಪುಟ–2

2. ಅದೇ, ಪುಟ–3

ಅನುಬಂಧ:

1. ಮಹಿಳಾ ಆತ್ಮಕಥನಗಳ ಛಾಯಾಚಿತ್ರಗಳು
2. ಗ್ರಂಥ ಋಣ

ಅ) ಆಕರ ಗ್ರಂಥಗಳು:

1. ಸರಸ್ವತಿ.ದು– ಈಗೇನ್ ಮಾಡೀರಿ?, ಮಾನಸ, ಪಂಚಾಯಿತಿ ರಸ್ತೆ, ಆಡುಗೋಡಿ ಅಂಚೆ, ಬೆಂಗಳೂರು, 2001

2. ಇಂದಿರಾ ಲಂಕೇಶ್– ಹುಳಿಮಾವು ಮತ್ತು ನಾನು, ಇಂದಿರಾ ಲಂಕೇಶ್ ಪ್ರಕಾಶನ, ಬೆಂಗಳೂರು 2023

3. ಸಮತಾ ಬಿ. ದೇಶಮಾನೆ– ಮಾತಂಗಿ ದೀವಟಿಗೆ, ಶ್ರೀ ಅನ್ನಪೂರ್ಣ ಪ್ರಕಾಶನ, ಬೆಂಗಳೂರು, 2015

4. ಪ್ರತಿಭಾ ನಂದಕುಮಾರ್– ಅನುದಿನದ ಅಂತರಗಂಗೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2014

5. ಅಮೃತಾ ಪ್ರೀತಂ(ಮೂಲ)– ರಶೀದಿ ತಿಕೇಟು, (ಅನು)ಹಸನ್ ನಯೀಂ ಸುರಕೋಡ, ಲೋಹಿಯಾ ಪ್ರಕಾಶನ, ಬಳ್ಳಾರಿ, 2004

6. ಕೆ. ಸುಮಿತ್ರಾ ಬಾಯಿ – ಸೂಲಾಡಿ ಬಂದೋ ತಿರುತಿರುಗೀ, ಅಭಿರುಚಿ ಪ್ರಕಾಶನ, ಮೈಸೂರು,2021

ಬ) ಪರಾಮರ್ಶನ ಗ್ರಂಥಗಳು:

1. ಪುಟ್ಟಯ್ಯ ಬಿ. ಎಂ– ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999

2. ಶರಣಮ್ಮ ಅ. ಗೊರೆಬಾಳ– ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ, ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕ, ಗದಗ, 2002

3. ಶೋಭಾ ನಾಯಕ– ಆತ್ಮವೃತ್ತಾಂತ, ಜಾಗೃತಿ ಪ್ರಿಂರ್ಸ್, ಬೆಂಗಳೂರು, 2019

4. ಸಬಿಹಾ ಭೂಮಿಗೌಡ(ಸಂ)– ಅನುಸಂಧಾನ, ಸಿದ್ದಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ, 2011

5. ಸಬಿಹಾ ಭೂಮಿಗೌಡ(ಸಂ)– ಲೇಖ ಲೋಕ–5, ಕರ್ನಾಟಕ ಲೇಖಕರ ಸಂಘ ಬೆಂಗಳೂರು, 2016

6. ಬಸವರಾಜ ಕಲ್ಗುಡಿ– ನಕ್ಷೆ–ನಕ್ಷತ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, 2019